ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಹೌದು.

ಆ) ಮೈಸೂರು ಸಕ್ಕರೆ ಕಂಪನಿ ಮುಂಡ್ಯ ಇಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿರುವ ಸಹವಿದ್ಯುತ್ ಯೋಜನೆಯ ಉತ್ಪಾದನಾ ಸಾಮರ್ಥ್ಯವು 28.00 ಮೆ.ವ್ಯಾ. ಆಗಿರುತ್ತದೆ. ಈ ಘಟಕವನ್ನು ರೂ. 76.35 ಕೋಟಿ ಅಂದಾಜು ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿದೆ. ಸದರಿ ಘಟಕದ ಕಾಮಗಾರಿ ಕೆಲಸಗಳು ಶೇ. 80ರಷ್ಟು ಪೂರ್ಣಗೊಂಡಿದ್ದು, ಇದರ ಯಂತ್ರೋಪಕರಣಗಳ ಸ್ಥಾಪನೆಯು ಪ್ರಗತಿಯಲ್ಲಿದೆ.

ಇ) ಈ ಘಟಕವನ್ನು ಮಾರ್ಚ್ 2003ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿತ್ತು. ಆದರೆ ಆರ್ಥಿಕ ಪರಿಸ್ಥಿತಿಯ ಮುಗ್ಗಟ್ಟಿನಿಂದಾಗಿ ಇದನ್ನು ಪೂರ್ಣಗೊಳಿಸಲು ಇನ್ನೂ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಹೌದು.

ಈ) ಪ್ರತಿ ಯೂನಿಟ್‌ಗೆ ಅಂದಾಜು ರೂ. 2 ವೆಚ್ಚವಾಗುತ್ತದೆ.

ಉ) ಹೌದು. ಬಾಯ್ಲರ್ ಫ್ಲೂ ಗ್ಯಾಸ್‌ಗಳಿಂದ ಕಣಗಳನ್ನು ಸಂಗ್ರಹಿಸಲು ಅತ್ಯಾಧುನಿಕ ಎಲೆಕ್ಟ್ರೋ ಸ್ಟ್ಯಾಟಿಕ್ ಪ್ರಿಸಿಪಿಟೇಟರ್‌ಗಳನ್ನು ಸ್ಥಾಪಿಸಲಾಗಿದೆ. ಚಿಮಣಿಯಿಂದ ಹೊರಬರುವ ಹೊಗೆಯು ಕಣಗಳನ್ನು ಹೊಂದಿರುವುದಿಲ್ಲವಾದ್ದರಿಂದ ಕಾರ್ಬನ್ ಕಣಗಳ ಸಮಸ್ಯೆ ಇರುವುದಿಲ್ಲ.

ಮಂಗಳೂರು ಎಂ.ಸಿ.ಎಫ್ ಹಣಕಾಸು ವಿವರ

1564 (2051) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರಿನ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ ಕಂಪನಿಯಲ್ಲಿ ರಾಜ್ಯದ ಎಷ್ಟು ಸಹಕಾರಿ ಸಂಘಗಳು ಎಷ್ಟೆಷ್ಟು ಷೇರು ಹಣವನ್ನು ತೊಡಗಿಸಿವೆ;

ಆ) ಆ ಕಂಪನಿ 1998-99, 1999-2000ದಲ್ಲಿ ವರ್ಷಗಳಲ್ಲಿ ಮಾರಾಟ ಮಾಡಿದ ವಿವಿಧ ಗೊಬ್ಬರಗಳ ಮೊತ್ತವೆಷ್ಟು;

ಇ) ಈ ಕಂಪನಿ 31-3-2003ಕ್ಕೆ ಗಳಿಸಿದ ಕೂಡಿಬಿದ್ದ ಹಾನಿಯ ಮೊತ್ತ ವೆಷ್ಟು;

ಈ) ಈ ಕಂಪನಿಗೆ 30-9-2000ರವರೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ನೀಡಿರುವ ವಿವಿಧ ಹಣಕಾಸು ನೆರವು ಮತ್ತು ಸಾಲದ ಮೊತ್ತವೆಷ್ಟು;

ಉ) ಈ ಕಂಪನಿಯ ಅಧಿಕಾರಿ 1999-2000ದಲ್ಲಿ ಪಡೆದ ಒಟ್ಟಾರೆ ಸಂಭಾವನೆ ಎಷ್ಟು?

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಸದರಿ ಕಂಪನಿಯಲ್ಲಿ ಕರ್ನಾಟಕ ರಾಜ್ಯದ 225 ಸಹಕಾರಿ ಸಂಘಗಳು ರೂ. 10-00 ಮೌಲ್ಯದ 2,47,735 ಈಕ್ವಿಟಿ ಷೇರುಗಳನ್ನು ಹೊಂದಿರುತ್ತವೆ.

ಆ) ಈ ಕಂಪನಿಯು 1998-99, 1999-2000ದಲ್ಲಿ ಮಾರಾಟ ಮಾಡಿರುವ ವಿವಿಧ ಗೊಬ್ಬರಗಳ ವಿವರ ಕೆಳಕಂಡಂತಿದೆ:

ಗೊಬ್ಬರದ ವಿಧಗಳು	1998-99		1999-2000	
	ಪ್ರಮಾಣ (ಎಂ.ಟಿ.ಎಸ್.)	ಮೌಲ್ಯ (ಲಕ್ಷ ರೂ.ಗಳಲ್ಲಿ)	ಪ್ರಮಾಣ (ಎಂ.ಟಿ.ಎಸ್.)	ಮೌಲ್ಯ (ಲಕ್ಷ ರೂ.ಗಳಲ್ಲಿ)
1	2	3	4	5
ಯೂರಿಯಾ	3,46,185	28,906.01	3,33,289	33,859.19
ಡಿ.ಎ.ಪಿ.	1,81,667	22,520.26	2,08,769	25,391.60
ಇತರೆ	8,393	518.05	35,806	2,064.44
ಒಟ್ಟು	5,36,245	51,944.32	5,77,864	61,315.23

ಇ) ಈ ಕಂಪನಿಯ 1996-97 ರಿಂದ ಲಾಭದಲ್ಲಿದೆ. 1996-97 ರಿಂದ ಪಡೆದಿರುವ ನಿವ್ವಳ ಲಾಭ ಕೆಳಕಂಡಂತಿದೆ:

ವರ್ಷ	ರೂ. ಕೋಟಿಗಳಲ್ಲಿ
1996-97	0.18
1997-98	17.33
1998-99	30.23
1999-2000	34.84

ಈ) ಕರ್ನಾಟಕ ಸರ್ಕಾರ ನೀಡಿರುವ ಆರ್ಥಿಕ ಸಹಾಯ:

ಸಾಲ	ರೂ. 14.59 ಕೋಟಿಗಳು
ಮಾರಾಟ ತೆರಿಗೆ ಮುಂದೂಡುವಿಕೆ	ರೂ. 13.73 ಕೋಟಿಗಳು
ಒಟ್ಟು	ರೂ. 28.32 ಕೋಟಿಗಳು

ಬಿ.ಐ.ಎಫ್.ಆರ್. ನ ಮಂಜೂರು ಮಾಡಿರುವ ಕಂಪನಿಯ ಪುನರುಜ್ಜೀವನ ಯೋಜನೆಯಂತೆ ಸದರಿ ಸಾಲವನ್ನು 2005-06ನೇ ಸಾಲಿನಿಂದ ಪ್ರಾರಂಭಿಸಿ 5 ವಾರ್ಷಿಕ ಸಮ ಕಂತುಗಳಲ್ಲಿ ಕಂಪನಿಯು ತೀರಿಸಬೇಕಾಗಿದೆ.

ಕೇಂದ್ರ ಸರ್ಕಾರದಿಂದ ಕಂಪನಿಯು ಯಾವುದೇ ಹಣ ಸಹಾಯ ಪಡೆದಿರುವುದಿಲ್ಲ.

ಉ) ಈ ಕಂಪನಿಯು 1999-2000ದಲ್ಲಿ ಒಟ್ಟು 328 ಅಧಿಕಾರಿಗಳಿಗೆ ಒಟ್ಟು ರೂ. 538.60 ಲಕ್ಷಗಳ ಸಂಭಾವನೆಯನ್ನು ನೀಡಿದೆ.

ಉತ್ತರ ಕರ್ನಾಟಕ ಭಾಗದ ಗ್ರಾಮೀಣ ಕೃಷಿರಾಸು ಅಭಿವೃದ್ಧಿ

1565 (2052) ಶ್ರೀ ಬಿಲ್ಲಪ್ ಚಂದ್ರಕಾಂತ ಗುರಪ್ಪ (ಧಾರವಾಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪಶುಸಂಗೋಪನಾ ಇಲಾಖೆಯಲ್ಲಿ ಹಾಲಿನ ಹಸು (ರಾಸುತಳಿ) ಅಭಿವೃದ್ಧಿ ಕುರಿತು ಕೈಗೊಂಡಿರುವ ಕ್ರಮಗಳೇನು;

ಆ) ಉತ್ತರ ಕರ್ನಾಟಕ ಭಾಗದ ಉತ್ತಮ ಹಾಲು ಹಿಂಡುವ ಗ್ರಾಮೀಣ ಕೃಷಿ ತಳಿ ರಾಸು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸುತ್ತಿದೆಯೇ;